ಸಿ. ಸಿ. ನಂ. 17/2022
ಪಿ.ಡಬ್ಲ್ಯೂ–3
ಸಿ.ಡಬ್ಲ್ಯೂ–3

ದಿನಾಂಕ 13–10–2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಪಾಟೀ ಸವಾಲು:** ಆರೋಪಿಪರ ಪರ ಶ್ರೀ ಎನ್ ಆರ್ ಎನ್ ವಕೀಲರಿಂದಃ

07. ನಾನು ಕಣಗಿಲ್ ಬಾಲಚಂದ್ರ ನಾಯಕ ರವರ ವಿರುದ್ಧದ ಪ್ರಕರಣದಲ್ಲಿ ಕೂಡ ಮಹಜರ ಸಾಕ್ಷಿಯಾಗಿ ನುಡಿದಿದ್ದೇನೆ ಎಂದರೆ ಸರಿಯಲ್ಲ. 20 ವರ್ಷಗಳಿಂದ ನಾನು ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ಮಾಸ್ತಿಕಟ್ಟಾ ರೇಂಜ್ ನಲ್ಲಿ 2 ವರ್ಷ ಕೆಲಸ ಮಾಡಿದ್ದೇನೆ. ಅಲ್ಲಿಂದ ಬಿಟ್ಟು ನಾನು ನೇರವಾಗಿ ಬಾಳೇಗುಳಿ ಸೆಕ್ಷನ್ ಗೆ ಬಂದಿರುತ್ತೇನೆ. ಇಲ್ಲಿ ಪ್ಲಾಂಟೇಶನ್ ನ ಕೆಲಸ ಮಾಡುತ್ತೇನೆ. ನಾನು ಏಳೆಂಟು ಹತ್ತು ಪಂಚನಾಮೆಗಳಿಗೆ ಸಹಿ ಮಾಡಿರುತ್ತೇನೆ. ನಾನು 6 ನೇ ತರಗತಿ ನಪಾಸಗಿರುತ್ತೇನೆ. ಯಾವ ರೀತಿ ಪಂಚಾನಾಮೆ ಬರೆಯಬೇಕು ಎಂದು ನೋಡಿಕೊಂಡಿರುತ್ತೇನೆ. ನಾನು ವರ್ಷಕ್ಕೆ 2 ಪಂಚನಾಮೆಗಳು ಬರೆದಿರುವುದನ್ನು ನೋಡಿರುತ್ತೇನೆ, ಪಂಚನಾಮೆಯನ್ನು ಇದೇ ರೀತಿ ಬರೆಯಬೇಕು ಎಂದು ನಾನು ಹೇಳಿ ಬರೆಸಿರುವ ಯಾವುದೇ ಪಂಚನಾಮೆ ಇರುವುದಿಲ್ಲ. ಪಂಚನಾಮೆಯನ್ನು ಸಿಬ್ಬಂದಿಗಳೆ ಬರೆಯವುದು. ನಾನು ಈ ರೀತಿ ಬರೆಯಿರಿ ಎಂದು ಹೇಳಿ ಬರೆಸಿಲ್ಲ. 5 ಜನ ಇದ್ದು ಬರೆದಿರುವ ಪಂಚನಾಮೆಯನ್ನು ನಾನು ನೋಡಿಲ್ಲ. ಪಂಚನಾಮೆ ಬರೆಯಲು 5 ಜನರ ಹಾಜರಾತಿ ಬೇಕು. ನಾನು ಹೇಳಿದಂತಹ ಪಂಚನಾಮೆಗೆ 5 ಜನರು ಭಾಗವಹಿಸಿಲ್ಲ.

8. ಊರಿನಲ್ಲಿ ಯಾವುದೇ ವ್ಯಕ್ತಿಗಳನ್ನು ವಶಕ್ಕೆ ಪಡದರೇ ಜನರು ಅಲ್ಲಿ ಸೇರುತ್ತಾರೆ ಎಂದರೆ ಸರಿ. ಇಲಾಖೆಯವರು ವಶಕ್ಕೆ ಪಡೆದದ್ದು ಗೊತ್ತಾದಾಗ ಕುತೂಹಲದಿಂದ ಕೂಡ ಜನ ಸೇರುತ್ತಾರೆ ಎಂದರೆ ಸರಿ. ನವಗದ್ದೆಯಲ್ಲಿ ಇರುವ ಜನರ ಪರಿಚಯ ಇದೆ ಎಂದರೆ ಸಾಕ್ಷಿ ಅಲ್ಲಿ 3 ಮನೆಗಳು ಇರುವುದು

ಎಂದು ನುಡಿಯುತ್ತಾರೆ. ನವಗದ್ದೆಯಲ್ಲಿ ನನ್ನ ಸಂಬಂಧಿಕರ 3 ಮನೆ ಗಳು ಇವೆ. ನನ್ನ ಅಣ್ಣ ತಮ್ಮಂದಿರ ಮನೆಗಳು ಅವು. ಒಟ್ಟು 7–8 ಜನರು ಆ ಮೂರು ಮನೆಗೆ ಸಂಬಂಧಪಟ್ಟು ಇದ್ದೇವೆ. ಗ್ರಾಮ ಅರಣ್ಯ ಕಮಿಟಿಗೆ ಆ ಎಲ್ಲಾ ಮನೆಯವರು ಸದಸ್ಯರು. ಅಲ್ಲಿ ಬಿ.ಡಿ.ಗೌಡರ ಹಾಗೂ 1 ನೇ ಆರೋಪಿ ಮನೆ ಇದ. ಬಿ ಡಿ ಗೌಡರ ಮನೆಯಲ್ಲಿ ಅವರ ಇಬ್ಬರು ಮಕ್ಕಳು ಹಾಗೂ ಸೊಸೆಯಂದಿರು ಇದ್ದಾರೆ. ಅರಣ್ಯ ಇಲಾಖೆ ಸಿಬ್ಬಂದಿಗಳು ನನ್ನ ಅಣ್ಣ ತಮ್ಮಂದಿರನ್ನು ಹಾಗಾ ಬಿ ಡಿ ಗೌಡರ ಮನೆಯವರನ್ನು ಪಂಚರಾಗಿ ಸಹಕರಿಸಲು ಕರೆದುಕೊಂಡು ಬರಲು ಹೇಳಿರುವುದಿಲ್ಲ. ಬಿ ಡಿ ಗೌಡರು ಗ್ರಾಮ ಅರಣ್ಯ ಸಮಿತಿಯ ಅಧ್ಯಕ್ಷರು. ಆ ವ್ಯಾಪ್ತಿಯಲ್ಲಿ ಅರಣ್ಯ ಕ್ಕೆ ಸಂಬಂಧಪಟ್ಟಂತಹ ಘಟನೆ ನಡೆದಾಗ ಅಧ್ಯಕ್ಷರಿಗೆ ತಿಳಿಸಬೇಕು ಎಂದರೆ ಸರಿ. ಸದ್ರಿ ಗ್ರಾಮ ಅರಣ್ಯ ಸಮಿತಿಯ ಅಧ್ಯಕ್ಷ ರು ಮತ್ತು ಎಲ್ಲ ಸದಸ್ಯರಿಗೆ ಅರಣ್ಯ ಸಂರಕ್ಷಣಾ ಜವಾಬ್ದಾರಿ ಇದೆ ಎಂದರೆ ಸರಿ.

9. ಬಿ ಡಿ ಗೌಡರ ಮನೆ ಉತ್ತರಕ್ಕೆ ಮುಖ ಮಾಡಿ ಇದೆ. ನನ್ನ ಹಾಗೂ ಬಿ ಡಿ ಗೌಡರ ಮನೆಗೆ 1 ಕಿ. ಮೀ ಅಂತರ ಇದೆ. 1 ನೇ ಆರೋಪಿ ಮತ್ತು ಬಿ ಡಿ ಗೌಡರ ಮನೆಗೆ ಅರ್ಧ ಕಿ.ಮೀ ಅಂತರ ಇದೆ. ನಾನು ಹೇಳುವ ಘಟನಾ ಸ್ಥಳದಿಂದ ಬಿ ಡಿ ಗೌಡರ ಮನೆ ಯಾವ ದಿಕ್ಕಿಗೆ ಇದೆ ಎಂದು ನನಗೆ ಗೊತ್ತಿಲ್ಲ. 1 ನೇ ಆರೋಪಿಯ ಮನೆಯ ಯಾವ ದಿಕ್ಕಿಗೆ ನಾನು ಹೇಳುವ ಘಟನಾ ಸ್ಥಳ ಬರುತ್ತದೆ ಎಂದು ಗೊತ್ತಿಲ್ಲ. ಬಿ ಡಿ ಗೌಡರ ಮನೆಯ ಪೂರ್ವಕ್ಕೆ ಅವರ ತೋಟ ಬರುತ್ತದೆ. ಅವರಿಗೆ 8 ರಿಂದ 9 ಎಕರೆ ಜಮೀನು ಇದೆ. ಅವರಿಗೆ 2 ಎಕರೆಯಲ್ಲಿ ತೆಂಗಿನ ಮರ ಇದೆ. ಮತ್ತೇ ಅಡಿಕೆ ಮರಗಳು ಇವೆ. ನನ್ನ ಪ್ರಕಾರ ಸನ್ಯಾಸಿ ಮಡಿ ಹಳ್ಳ ಬಿ ಡಿ ಗೌಡರ ತೋಟದ ಬಳಿ ಹರಿಯುವುದನ್ನು ನೋಡಿದ್ದೀರಾ ಎಂದರೆ ಸಾಕ್ಷಿ 2 ಹಳ್ಳಗಳು ಇವೆ ಹಾಗೂ 1 ಹಳ್ಳ ಸನ್ಯಾಸಿಮಡಿ ಹಳ್ಳಕ್ಕೆ ಹೋಗಿ ಸೇರುತ್ತದೆ ಎಂದು ನುಡಿಯುತ್ತಾರೆ. ಇನ್ನೊಂದು ಹಳ್ಳ

ಅವರ ತೋಟದಿಂದ 100 ಮೀ. ದೂರದಲ್ಲಿ ಸನ್ಯಾಸಿಮಡಿ ಹಳ್ಳಕ್ಕೆ ಸೇರುತ್ತದೆ. ಆ 2 ಹಳ್ಳಗಳು ಅತ್ಯಂತ ವೇಗವಾಗಿ ಹರಿಯುತ್ತದೆ. ಅಗಸ್ಟ್ ತಿಂಗಳಲ್ಲಿ ಮಳೆ ಜೋರು ಇದ್ದು ಹಳ್ಳ ಕೂಡ ಅತ್ಯಂತ ವೇಗವಾಗಿ ಹರಿಯುತ್ತದೆ ಎಂದರೆ ಸರಿ. ಹಳ್ಳಗಳು ಅವರ ತೋಟ ಕಡೆಯಿಂದ ದಕ್ಷಿಣದ ಕಡೆಗೆ ಹರಿದು, ಅಲ್ಲಿಂದ ಪಶ್ಚಿಮಕ್ಕೆ ಹರಿಯುತ್ತದೆ.

10. 1 ನೇ ಆರೋಪಿ ಮತ್ತು ಬಿ ಡಿ ಗೌಡರ ತೋಟಗಳು ಹೊಂದಿಕೊಂಡಿದೆ. 1 ನೇ ಆರೋಪಿ ಅವರ ತೋಟಕ್ಕೆ ಮುಳ್ಳಿನ ಬೇಲಿ ಹಾಕಿಕೊಂಡಿದ್ದಾರೆ. 1 ನೇ ಆರೋಪಿಗೆ ಅಂದಾಜು 2 ಎಕರೆ ಜಮೀನು ಇದೆ. ಅವರು ಗದ್ದೆ ಕೃಷಿ ಕೂಡ ಮಾಡುತ್ತಾರೆ. 1 ನೇ ಆರೋಪಿಯ ಮನೆ ಬಿ ಡಿ ಗೌಡರ ಮನೆಗೆ ಪಶ್ಚಿಮ ದಕ್ಷಿಣ ಮೂಲೆಗೆ ಬರುತ್ತದೆ. ಅವರಿಬ್ಬರ ಜಮೀನುಗಳನ್ನು ಬೇರ್ಪಡಿಸಲು ಹಳ್ಳ ಹರಿಯುವುದಿಲ್ಲ. ಬಿ ಡಿ ಗೌಡರ ಮನೆಯಿಂದ ಆರೋಪಿ ಮನೆ ಕಾಣುವುದಿಲ್ಲ. ದಿನಾಂಕಃ 14/08/2020 ರಂದು 1 ನೇ ಆರೋಪಿಯ ಮನೆ ನೋಡಿದ್ದೆ. ಆ ದಿನ 1 ನೇ ಮನೆಗೆ ನನ್ನನ್ನು ಡಿ.ಆರ್.ಎಫ್.ಓ, ಆರ್.ಎಫ್.ಓ, ಮುಂತಾದವರು ಕರೆದುಕೊಂಡು ಹೋಗಿದ್ದರು. ಅವರ ಮನೆಯಲ್ಲಿ ಮದ್ದು ಗುಂಡುಗಳು ಸಿಕ್ಕಿರುವುದಿಲ್ಲ. ಆ ಮನೆಗೆ ಹೋಗುವ ಮುಂಚೆ ಶೋಧನಾ ಸಮುಚಿತವನ್ನು ಅವರು ತಯಾರಿಸಿಲ್ಲ. ನೇರವಾಗಿ ಮನೆಗೆ ಹೋಗಿರುವುದು. ಆ ಮನೆಯಲ್ಲಿ 15 ನಿಮಿಷ ಶೋಧನೆ ಮಾಡಲಾಯಿತು. ಆ ಸಮಯದಲ್ಲಿ ಅವರ ತಾಯಿ ಇದ್ದರು. ನನ್ನ ಸಮಕ್ಷಮದಲ್ಲಿ ಅವರ ತಾಯಿಯಲ್ಲಿ ಅವರನ್ನು ಬಂಧಿಸುತ್ತೇವೆ ಎಂದು ಹೇಳಿಲ್ಲ ಹಾಗೂ ನೋಟಿಸ್ಸು ಕೂಡ ಕೊಟ್ಟಿಲ್ಲ.

11. ತಲೆ, ಕಾಲು ಹಾಗೂ ಮರಿ ಹಳ್ಳದಲ್ಲಿ ಇತ್ತು. 1 ನೇ ಆರೋಪಿಯನ್ನು ಕರೆದುಕೊಂಡು ಹೋದಾಗ ಹಳ್ಳದಲ್ಲಿ ನೋಡಿದೆ. ಹಳ್ಳದಿಂದ ಹೊಟ್ಟೆಯ ಭಾಗ,ಕರುಳಿನ ಭಾಗ ಹಾಗೂ ಗರ್ಭದ ಭಾಗ

ನನ್ನ ಸಮಕ್ಷಮ ವಶಪಡಿಸಿದ್ದಾರೆ. ಅವುಗಳು 7 - 8 ಕೆ ಜಿ ಭಾರ ಇದ್ದವು. ಅವುಗಳು ಕೊಳೆತು ನಾರುವ ಸ್ಥಿತಿಯಲ್ಲಿ ಇರಲಿಲ್ಲ. ಕೆಟ್ಟ ವಾಸನೆ ಬರುತ್ತಿರಲಿಲ್ಲ. ಅವುಗಳನ್ನು ಜಪ್ತಿ ಮಾಡಿ, ಪ್ಯಾಕ್ ಮಾಡಿ ನನ್ನ ಸಹಿಗಳನ್ನು ಪಡೆದ ಚೀಟಿ ಅಂಟಿಸಿದ್ದಾರೆ. ಪಂಚನಾಮೆಯನ್ನು ಪಶುವೈದ್ಯರನ್ನು ಕರೆಸಿ ನಂತರ ಬರೆದರು. ಚಾಸಾ–1 ರವರು ಪಂಚನಾಮೆ ಬರೆದಿರುತ್ತಾರೆ. ನಂತರ ನಮ್ಮ ಸಹಿ ಪಡೆದರು. ಪಂಚನಾಮೆಯನ್ನು ಈ ರೀತಿ ಬರೆಯಿರಿ ಎಂದು ನಾನು ಹೇಳಿರುವುದಿಲ್ಲ.

12. 1 ನೇ ಆರೋಪಿಯನ್ನು ಹಿಡಿದರು ಎಂದು ಹೇಳುವ ಸ್ಥಳಕ್ಕೂ 2 ಆರೋಪಿಗಳನ್ನು ಹಿಡಿದರು ಎಂದು ಹೇಳುವ ಸ್ಥಳಕ್ಕೂ ಅರ್ಧ ಕಿ. ಮೀ ಅಂತರ ಇದೆ. 1 ನೇ ಆರೋಪಿಯನ್ನು ಹಿಡಿದರು ಎಂದು ಹೇಳುವ ಯಾವ ದಿಕ್ಕಿಗೆ 2 ಆರೋಪಿಗಳನ್ನು ಹಿಡಿದರು ಎಂದು ಹೇಳುವ ಸ್ಥಳ ಬರುತ್ತದೆ ಎಂದು ಗೊತ್ತಿಲ್ಲ. ಕಂಚಿನಬಾಗಿಲನ ದೇವಸ್ಥಾನಕ್ಕೆ 2 ಆರೋಪಿಗಳನ್ನು ಹಿಡಿದರು ಎಂದು ಹೇಳುವ ಸ್ಥಳ 300 ಮೀ. ದೂರದಲ್ಲಿ ಇದೆ. ಗಣ್ಯ ಕೆಮಿಕಲ್ಸ್‌ಗೆ ಹೋಗುವ ರಸ್ತೆಯಿಂದ ಕಾಲು ದಾರಿ 250 ಮೀ. ದೂರದಲ್ಲಿ ಅಂಕೋಲಾ ಕಡೆಗೆ ಇದೆ. ರಾಷ್ಟ್ರಿಯ ಹೆದ್ದಾರಿಯಿಂದ ಆ ಕಾಲು ದಾರಿ ಹೋಗುತ್ತದೆ . 1 ನೇ ಆರೋಪಿ ಮನೆಗೆ ಹೋಗುವ ಕಾಲು ದಾರಿಯೇ ಆ ಕಾಲು ದಾರಿ. 2 ನೇ ಸಾರಿ ಹೋದಾಗ ಆ ಕಾಲು ದಾರಿ ಬಳಿ ನಮ್ಮ ಇಲಾಖಾ ಜೀಪ್ ನ್ನು ನಿಲ್ಲಿಸಿಲ್ಲ. ಮುಂದಕ್ಕೆ ಹೋಗಿ ಪ್ರಕೃತಿ ಪ್ರೊಡಕ್ಟ್ ಬಳಿ ಜೀಪು ನಿಲ್ಲಿಸಿ ಅಲ್ಲಿದ್ದ ಕಾಲು ದಾರಿಯಲ್ಲಿ ಹೋಗಿರುತ್ತೇವೆ. ಅಲ್ಲಿ ಎಡಕ್ಕೆ ಪಶ್ಚಿಮಕ್ಕೆ ಹೋದೆವು. ಆ ಕಾಲು ದಾರಿ ಮೇಲೆ ಹೇಳಿದ ಕಾಲು ದಾರಿಗೆ ಕೂಡುವುದಿಲ್ಲ. 1 ನೇ ಆರೋಪಿ ಮನೆ ತಲುಪಿದ ನಂತರ ಕೂಡುತ್ತದೆ.

13. ಮೊದಲು ಬಂದಾಗ ಕಾಲುದಾರಿಗಿಂತ 50 ಮೀ. ದೂರ ಯಲ್ಲಾಪುರದ ಕಡೆಗಾದಂತೆ ಜೀಪ್‌ನ್ನು ನಿಲ್ಲಿಸಿದರು. ಅಲ್ಲಿಂದ ಮುಂದೆ ಇರುವ ಬಸ್ ನಿಲ್ದಾಣ ಕಾಣುವುದಿಲ್ಲ. ಬಸ್ ನಿಲ್ದಾಣ ಪಕ್ಕದಲ್ಲಿ ನನ್ನ ತಮ್ಮ ಅಂಗಡಿ ಇಟ್ಟಿದ್ದಾರೆ. ಅವನು ಬೆಳಿಗ್ಗೆ 11 ಗಂಟೆಯಿಂದ ಸಂಜೆ 6 ವರೆ ತನಕ ಅಂಗಡಿ ತೆರೆದಿರುತ್ತಾರೆ. ಕಂಚಿನಬಾಗಿಲಿನಲ್ಲಿರುವ 2 ದೇವಸ್ಥಾನಗಳಲ್ಲಿ ಮಧ್ಯಾಹ್ನ 1 ಗಂಟೆಯಿಂದ 3 ಗಂಟೆಯ ತನಕ ಪೂಜೆ ಇರುತ್ತದೆ ಎಂದರೆ ಸರಿ. ಟ್ರಕ್ ಮತ್ತು ಇತರ ವಾಹನಗಳ ಚಾಲಕರು ವಾಹನ ನಿಲ್ಲಿಸಿ ಅಲ್ಲಿರುವ ದೇವಸ್ಥಾನದಲ್ಲಿ ಕೈ ಮುಗಿದೇ ಮುಂದಕ್ಕೆ ಹೊಗುತ್ತಾರೆ ಎಂದರೆ ಸರಿ. ಆ ದೇವಸ್ಥಾನಕ್ಕೆ ಬಂದಿರವ ಜನರನ್ನು ಪಂಚರಾಗಿ ಕರೆಯಿಸುವ ಎಂದು ಮೇಲಾಧಿಕಾರಿಗಳಿಗೆ ನಾನು ತಿಳಿಸಿಲ್ಲ. ನಾನು ಇಲಾಖೆ ಸಿಬ್ಬಂದಿಯಾಗಿರುವುದರಿಂದ ನನ್ನ ತಮ್ಮನನ್ನು ಪಂಚರಾಗಿ ಕರೆಸುತ್ತೇನೆ ಎಂದು ಮೇಲಾಧಿಕಾರಿಗಳಿಗೆ ಹೇಳಿಲ್ಲ. ಆ ಇಬ್ಬರು ಆರೋಪಿಗಳನ್ನು ಎಷ್ಟು ದೂರದಲ್ಲಿ ಹಿಡಿದರು ಎಂದು ನನಗೆ ಗೊತ್ತಿಲ್ಲ. ನಾನು ಅವರನ್ನು ಹಿಡಿಯಲು ಸಿಬ್ಬಂದಿಗಳ ಜೊತೆ ಬೆನ್ನಟ್ಟಿ ಲ್ಲ. ಫ್ರಾ ಸಾ-2 ರವರು ಅವರನ್ನು ಬೆನ್ನಟ್ಟಿದ್ದಾರೆ. ಆಗ ನಾನು ಜೀಪಿನ ಬಳಿಯೇ ಇದ್ದೆ.

14. ಇಬ್ಬರ ಪೈಕಿ ಯಾರ ಬಳಿ ಚೀಲ ಇತ್ತು ಎಂದು ನಾನು ಹೇಳಿಕೆಯಲ್ಲಿ ಹಾಗೂ ಪಂಚನಾಮೆಯಲ್ಲಿ ಬರೆಸಿಲ್ಲ. ಯಾರು ಆ ಚೀಲ ತಂದಿದ್ದರು ಎಂದು ನಾನು ನೋಡಿಲ್ಲ. ನನ್ನ ಸಮಕ್ಷಮ ಸಿಬ್ಬಂದಿಗಳು ಇಂತವರು ಚೀಲ ತಂದದ್ದು ಎಂದು ಹೇಳಿಲ್ಲ. ನಿ ಪಿ -1 ಪಂಚನಾಮೆಯನ್ನು ಅರ್ಧ ಗಂಟೆಯಲ್ಲಿ ಬರೆದಿರುತ್ತಾರೆ. ಅಲ್ಲಿಂದ ಬೆನ್ನಟ್ಟಿ ಇಬ್ಬರನ್ನು ಹಿಡಿದುಕೊಂಡು ಬರಲು ಅರ್ಧ ಗಂಟೆ ತಗಲಿತು. ಅವರನ್ನು ಯಾರು ಹಿಡಿದರು ಎಂದು ನಾನು ನೋಡಿಲ್ಲ. ಅವರಿಬ್ಬರನ್ನು ಯಾರು ಹಿಡಿದರು

ಎಂದು ಸಿಬ್ಬಂದಿಗಳು ನನಗೆ ಹೇಳಿಲ್ಲ. ಸಿಬ್ಬಂದಿಗಳು ಯಾವ ಆರೋಪಿಗಳನ್ನು ಯಾರು ಹಿಡಿದುಕೊಂಡು ಬಂದರು ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಅವರಿಬ್ಬರನ್ನು ಯಾವ ಸಿಬ್ಬಂದಿಗಳು ಜೀಪಿನಲ್ಲಿ ಕೂಳಿರಿಸಿಕೊಂಡು ಬಂದರು ಎಂದು ಗೊತ್ತಿಲ್ಲ. ಮಾಂಸದ ಚೀಲ ಮತ್ತು ಬೈಕ್ ನ್ನು ಯಾರು ತಂದರು ಎಂದು ನನಗೆ ಗೊತ್ತಿಲ್ಲ. ಕಚೇರಿಗೆ ಅವರಿಬ್ಬರನ್ನು ತಂದು ಎ.ಸಿ.ಎಫ್ ಮತ್ತು ಆರ್ ಎಫ್. ಓ ರವರ ಸುಪರ್ಧಿಗೆ ನೀಡಿದರು. ಅವರನ್ನು ಕರೆದುಕೊಂಡು ಬಂದ ನಂತರ ಕಚೇರಿಯಲ್ಲಿ ಪಂಚನಾಮೆ ಬರೆದಿರುತ್ತಾರೆ. ಅದಕ್ಕೆ ನನ್ನ ಮತ್ತು ಫ್ರಾ ಸಾ -2 ರವರ ಸಹಿಗಳನ್ನು ಕಚೇರಿಯಲ್ಲಿ ಪಡೆದರು. ಆ ಪಂಚನಾಮೆಯನ್ನು ಅರ್ಧ ಗಂಟೆ ಬರೆದಿರುತ್ತಾರೆ. ಅದನ್ನು ಈ ರೀತಿಯಾಗಿ ಬರೆಯಬೇಕು ಎಂದು ನಾನು ಹೇಳಿಲ್ಲ.

15. ಮಾಂಸ, ಮೊಬೈಲ್ ಪೋನು ಮತ್ತು ಚೀಲಗಳನ್ನು ಪ್ರತ್ಯೇಕ ವಾಗಿ ಪ್ಯಾಕ್ ಮಾಡಿ ಮೊಹರು ಮಾಡಿ ನಮ್ಮ ಸಹಿ ಮಾಡಿದ ಚೀಟಿಯನ್ನು ಅಂಟಿಸಿರುತ್ತಾರೆ. ಚೀಲದಲ್ಲಿ ಇತ್ತು ಎಂದು ಹೇಳುವ ಮಾಂಸದ ತುಂಡುಗಳು ಅಂಗೈ ಗಾತ್ರದ ಮಾಂಸದ ತುಂಡುಗಳು. ಆ ಮಾಂಸದಲ್ಲಿ ರಕ್ತ ಇತ್ತು. ಆ ಮಾಂಸವನ್ನು ಬೇರೆ ವಸ್ತುವಿನಿಂದ ಮುಚ್ಚಿ ಚೀಲದಲ್ಲಿ ಇಟ್ಟಿರಲಿಲ್ಲ. ಹಾಗೇ ಇಟ್ಟಿದ್ದರು. ಚೀಲಕ್ಕೆ ರಕ್ತ ಅಂಟಿರಲಿಲ್ಲ. ಮಾಂಸ ಇತ್ತು ಎಂದು ಹೇಳುವ ಚೀಲವನ್ನು ಯಾರು ತೆರೆದರು ಎಂದು ಗೊತ್ತಿಲ್ಲ. ಆರೋಪಿಗಳನ್ನು ಹಿಡಿಯಲು ಓಡಿದ ಮಧ್ಯದಲ್ಲಿ ನಾನು ಆ ಚೀಲವನ್ನು ತೆರೆಯಲು ಹೋಗಿಲ್ಲ. ನಾನು ಆರೋಪಿಗಳನ್ನು ಹಿಡಿದು ತರುವ ಮೊದಲೇ ಚೀಲವನ್ನು ನೋಡಿದ್ದೇನೆ. ಮಾಂಸವನ್ನು ಆರ್. ಎಫ್. ಓ ರವರು ಕೈ ಹಿಡಿದು ನೋಡಿಲ್ಲ. ಅವರು ಸಿಬ್ಬಂದಿಗಳು ಕೈಯಲ್ಲಿ ಹಿಡಿದು ನೋಡಿರುವುದನ್ನು ವೀಕ್ಷಿಸಿದ್ದಾರೆ. ಆ ಮಾಂಸದಲ್ಲಿ ಕೂದಲು ಇತ್ತು. ಕೂದಲು ಇರುವುದನ್ನು ನೋಡಿ ಆರ್ ಎಫ್ ಓ ರವರು

ಅದು ಕಡವೆ ಮಾಂಸ ಎಂದು ಖಚಿತ ಪಡಿಸಿಕೊಂಡರು. ಆ ಮಾಂಸ ತುಂಡುಗಳು 14 ತುಂಡುಗಳು ಇದ್ದವು. ಪಂಚನಾಮೆಗೆ ಅಂಗೈಯಗಲ ಗಾತ್ರದ 14 ತುಂಡುಗಳು ಇದ್ದವು ಎಂದು ಬರೆದಿರುತ್ತಾರೆ.

16. ನಾನು ಹೇಳಿದಂತ ಮೊದಲ ಪಂಚನಾಮೆಗೆ ಫ್ರಾ ಸಾ –2 ಮತ್ತು ಚಾಸಾ–5 ರಿಂದ 7 ರವರ ಸಹಿಗಳನ್ನು ಪಡೆದಿರುತ್ತಾರೆ. ನಾನು ಮಾಂಸಗಳನಾಗಿ ಪರಿವರ್ತಿಸಿದ ಸ್ಥಳ ಹಳ್ಳ. ಹಳ್ಳದಲ್ಲಿ ಮಾಂಸದ ಚೂರುಗಳು ಇರಲಿಲ್ಲ. ಚರ್ಮಕ್ಕೆ ಮಾಂಸ ಅಂಟಿಕೊಂಡಿರುವ ಚರ್ಮವನ್ನು ನಾನು ನೋಡಿಲ್ಲ. ಚರ್ಮದಿಂದ ಮಾಂಸವನ್ನು ಬೇರ್ಪಡಿಸಲು ರೆಡಿಯಮ್ ಕಟ್ಟರ್ ಅಥವಾ ಬ್ಲೇಡ್ ಉಪಯೋಗಿಸಿರುವುದು ನೋಡಿಲ್ಲ. ನನ್ನ ಸಮಕ್ಷಮ ಚರ್ಮದ ಅಳತೆ ಮಾಡಿರುವುದಿಲ್ಲ. ಹೊಟ್ಟೆಯ ಭಾಗದ ಚರ್ಮ ಮೃದು ವಾಗಿರುತ್ತದೆ ಎಂದರೆ ಸರಿ. ಆ ಚರ್ಮದಲ್ಲಿ 6 ಎಮ್ ಎಮ್ ರಾಡ್ ತೂರಿಸುವಷ್ಟು ಅಳತೆಯ ತೂತು ಇತ್ತು. ಕಾದ ಕಬ್ಬಿಣದ 6 ಎಮ್ ಎಮ್ ಅಳತೆಯ ರಾಡ್ ನ್ನು ಆ ಭಾಗಕ್ಕೆ ತೂರಿಸಿದರೇ ಅಂತಹ ತೂತು ಆಗುವ ಸಂಭವ ಇರುತ್ತದೆ ಎಂದರೆ ಸರಿ. ಕತ್ತಿಯನ್ನು ಯಾವ ಸಿಬ್ಬಂದಿ ತಂದರು ಎಂದು ಗೊತ್ತಿಲ್ಲ. ಬಂದೂಕನ್ನು ಯಾವ ಸಿಬ್ಬಂದಿ ತಂದರು ಗೊತ್ತಿಲ್ಲ. ಪಶು ವೈದ್ಯಾಧಿಕಾರಿಗಳು ಸಂಜೆ 4 ವರೆಗೆ ಬಂದರು. ಪಶು ವೈದ್ಯಾಧಿಕಾರಿಗೆ ಪೋನ್ ಮೂಲಕ ಘಟನೆ ಬಗ್ಗೆ ತಿಳಿಸಿದ್ದಾರೆ. ಅವರು ಬಂದ ನಂತರ ಘಟನೆಬಗ್ಗೆ ತಿಳಿಸಿಲ್ಲ. ಪಶು ವೈದ್ಯಾಧಿಕಾರಿ ಅವರ ವಾಹನದಲ್ಲಿ ವಲಯ ಕಚೇರಿಗೆ ಬಂದಿರುತ್ತಾರೆ. ಪಶು ವೈದ್ಯಾಧಿಕಾರಿ ಆ ಸ್ಯಾಂಪಲನ್ನು ಸ್ಥಳದಲ್ಲಿ ತೆಗೆದಿರುತ್ತಾರೆ. ಅವರು ಚರ್ಮ, ಮಾಂಸ, ಭ್ರೂಣ, ಕಾಲು ಹಾಗೂ ತಲೆಯ ಭಾಗ, ಹೊಟ್ಟೆಯ ಭಾಗ ಹಾಗೂ ಗರ್ಭಕೋಶದ ಭಾಗದ ಸ್ಯಾಂಪಲ್ ಗಳನ್ನು ತೆಗೆದಿರುತ್ತಾರೆ. ಆ ಸ್ಯಾಂಪಲಗಳನ್ನು ತೆಗೆದು ಚೌಕಾಕಾರದ ಪ್ಲಾಸ್ಟಿಕ್ ಬಾಕ್ಸ್ ನಲ್ಲಿ ಹಾಕಿದರು. ಅದರ ಮೇಲೆ ನಮ್ಮ ಹಾಗೂ ಸಿಬ್ಬಂದಿಗಳ ಸಹಿಗಳನ್ನು ಪಡೆದರು.

ಸಿ. ಸಿ. ನಂ. 17/2022

ಪಿ.ಡಬ್ಲ್ಯೂ–3

ಸಿ.ಡಬ್ಲ್ಯೂ–3

(ಮುಂದುವರೆದ ಪಾಟೀ ಸವಾಲು ನ್ಯಾಯಾಲಯ ಸಮಯ ಮುಗಿದಿರುವುದರಿಂದ ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.